**ದಿನಾಂಕಃ 19/02/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಪಾಟೀ ಸವಾಲು: ಪ್ರತಿವಾದಿಗಳ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

1. ಚಿಕ್ಕನೇರಳೆ ಗ್ರಾಮದ ಕರಿಯಯ್ಯ ರವರ ವಂಶವೃಕ್ಷ ಗೊತ್ತು. ಕರಿಯಯ್ಯ ರವರ ತಂದೆಯ ತಂದೆಯ ಹೆಸರು ದೇವಯ್ಯ. ದೇವಯ್ಯ ರವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ದೇವಯ್ಯ ರವರ ಹೆಂಡತಿಯ ಹೆಸರು ಗೊತ್ತಿಲ್ಲ. ದೇವಯ್ಯ ಮತ್ತು ಅವರ ಹೆಂಡತಿ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ದೇವಯ್ಯ ನವರ ಚಿಕ್ಕನೇರಳೆ ಯಲ್ಲಿರುವ ಮನೆಯ ನಂಬರ್ ಮತ್ತು ಚಕ್ಕುಬಂದಿ ಗೊತ್ತಿಲ್ಲ. ಕರಿಯಯ್ಯ ನವರ ತಂದೆಯ ಹೆಸರು ಹೆಳವಯ್ಯ. ಕರಿಯಯ್ಯ ನವರು ಅವರ ತಂದೆಗೆ ಒಬ್ಬನೇ ಗಂಡು ಮಗ. ಹೆಳವಯ್ಯ ರವರ ಮನೆಯ ನಂಬರ್ ಮತ್ತು ಚಕ್ಕುಬಂದಿ ಗೊತ್ತಿಲ್ಲ. ಅದರೆ ಚಿಕ್ಕನೇರಳೆಯಲ್ಲಿ ವಾಸವಾಗಿದ್ದರು. ಹೆಳವಯ್ಯ ರವರು ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ. ಕರಿಯಯ್ಯ ತೀರಿಕೊಂಡು ಸುಮಾರು 25–30 ವರ್ಷ ಆಗಿದೆ. ಕರಿಯ ಯ್ಯ ರವರ ಮನೆಯ ನಂಬರ್ ಮತ್ತು ಚಕ್ಕುಬಂದಿ ಗೊತ್ತಿಲ್ಲ.

2. ಕರಿಯಯ್ಯ ರವರ ವಾರಸುದಾರರು ಪುಟ್ಟಮ್ಮ, ಅವರ ಮಕ್ಕಳಾದ ಜವರಯ್ಯ, ಹನುಮಯ್ಯ, ಗೋವಿಂದಯ್ಯ, ರಾಜು, ಕೃಷ್ಣಯ್ಯ, ಪುಟ್ಟಿ ಮತ್ತು ಜಯಮ್ಮ. ಕರಿಯಯ್ಯ ನವರ ಹೆಂಡತಿಯ ಹೆಸರು ಪುಟ್ಟಮ್ಮ. ಪುಟ್ಟಿ ತೀರಿಕೊಂಡಿದ್ದಾರೆ. ಪುಟ್ಟಿಯನ್ನು ಕೊತ್ತವಳ್ಳಿ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದರು. ಪುಟ್ಟಿಯವರಿಗೆ ಎಷ್ಟು ಜನ ಮಕ್ಕಳು ಎಂದು ಗೊತ್ತಿಲ್ಲ. ಪುಟ್ಟಿಯ ಗಂಡ ತೀರಿಕೊಂಡಿದ್ದಾರೆ. ಅವರಿಗೆ ಒಬ್ಬ ಮಗ ಇದ್ದಾನೆ. ಜಯಮ್ಮ ನವರನ್ನು ದೊಡ್ಡನೇರಳೆ ಗ್ರಾಮಕ್ಕೆ ಮದುವೆ ಮಾಡಿಕೊಟ್ಟಿದ್ದಾರೆ. ಜಯಮ್ಮ ನವರಿಗೆ 3 ಜನ ಹೆಣ್ಣು ಮಕ್ಕಳು, ಒಬ್ಬ ಗಂಡು ಮಗ. ಜಯಮ್ಮನ ಗಂಡ ಸಣ್ಣಜವರಯ್ಯ ಬದುಕಿದ್ದಾರೆ. ಮೇಲ್ಕಂಡ ಗೋವಿಂದಯ್ಯ ತೀರಿಕೊಂಡಿದ್ದಾರೆ. ಅವರ ಹೆಂಡತಿಯ ಹೆಸರು ಗೌರಮ್ಮ, ಅವರ ಮಕ್ಕಳ ಹೆಸರು ಲತಾ ಮತ್ತು ಪುಟ್ಟಿ. ಗೌರಮ್ಮ, ಲತಾ ಮತ್ತು ಪುಟ್ಟಿ ರವರು ಚಿಕ್ಕನೇರಳೆ ಗ್ರಾಮದಲ್ಲಿ ವಾಸಿಸುತ್ತಿದ್ದಾರೆ.

3. ಹೆಳವಯ್ಯ ನವರ ಮಾಲೀಕತ್ವ ಮತ್ತು ಸ್ವಾಧೀನದಲ್ಲಿ ಯಾವ ಯಾವ ಜಮೀನು ಮತ್ತು ಆಸ್ತಿಗಳು ಇದ್ದವು ಎಂದು ಗೊತ್ತು. ಅವರ ಮಾಲೀಕತ್ವದಲ್ಲಿ 4-5 ಮನೆಗಳು ಇದ್ದವು, ಖಾಲಿ ನಿವೇಶನಗಳು ಇರಲಿಲ್ಲ. ಸದರಿ ಮನೆಗಳ ನಂಬರ್ ಮತ್ತು ಚಕ್ಕುಬಂದಿ ಗೊತ್ತಿಲ್ಲ. ಹೆಳವಯ್ಯುನ ಹೆಸರಿನಲ್ಲಿ ಸರ್ವೆ ನಂ.32/2ರ ಸ್ವತ್ತು ಇತ್ತು. ಸಾಕ್ಷಿ ಮುಂದುವರೆದು ಸರ್ವೆ ನಂ. 32/2 ದೇವಯ್ಯುನ ಹೆಸರಿನಲ್ಲಿತ್ತು, ಹೆಳವಯ್ಯುನ ಹೆಸರಿನಲ್ಲಿ ಯಾವುದೂ ಇರಲಿಲ್ಲ ಎಂದು ನುಡಿಯುತ್ತಾರೆ. ದೇವಯ್ಯುನ ಹೆಸರಿನಲ್ಲಿದ್ದ ದಾಖಲಾತಿಗಳನ್ನು ನಾನು ನೋಡಿಲ್ಲ. ಸರ್ವೆ ನಂ. 32/2 ದೇವಯ್ಯುನ ಹೆಸರಿನಲ್ಲಿ ಇದೆ ಎಂದು ವಾದಿಗಳು ಮಾಹಿತಿ ಕೊಟ್ಟರಾ ಎಂದರೆ ಸಾಕ್ಷಿಯು ನನಗೆ ತಿಳಿದಿದ್ದನ್ನು ನುಡಿಯುತ್ತಿದ್ದೇನೆ ಎನ್ನುತ್ತಾರೆ. ಈ ದಾವೆ ಚಿಕ್ಕನೇರಳೆ ಗ್ರಾಮದ ಸರ್ವೆ ನಂ. 32/2ರ 2 ಎಕರೆ 23 ಗುಂಟೆಗೆ ನಡೆಯುತ್ತಿದೆ. ಸರ್ವೆ ನಂ. 32/2ರ ಪಕ್ಕದಲ್ಲಿ ಸರ್ವೆ ನಂ. 30ರ ನನ್ನ ಜಮೀನು ಇದೆ. ಸರ್ವೆ ನಂ.30ರಲ್ಲಿ 6 ಎಕರೆ ಜಮೀನು ಇದೆ, ಅದು ಇನ್ನೂ ವಿಭಾಗವಾಗಿಲ್ಲ. ಸರ್ವೆ ನಂ.30 ಪುಟ್ಟಮ್ಮ ನವರ ಹೆಸರಿನಲ್ಲಿದೆ. ಸರ್ವೆ ನಂ. 30ರ 6 ಎಕರೆಯ ಚಕ್ಕುಬಂದಿ ಗೊತ್ತಿಲ್ಲ. ಸರ್ವೆ ನಂ.32/2ರ ಜಮೀನು ಸರ್ವೆ ನಂ. 30ರ ಪೂರ್ವಕ್ಕಿದೆ. ಪುನಃ ದಕ್ಷಿಣಕ್ಕಿದೆ ಎಂದು ನುಡಿಯುತ್ತಾರೆ.

4. ಸರ್ವೆ ನಂ.32/2ರ ಪೂರ್ವಕ್ಕೆ ಪುಟ್ಟಮ್ಮನ ಜಮೀನು ಇದೆ. ಪಶ್ಚಿಮಕ್ಕೆ ಸೋಮಯ್ಯು ನವರ ಜಮೀನು ಇದೆ. ಸೋಮಯ್ಯು ನವರ ಜಮೀನಿನ ಸರ್ವೆ ನಂಬರ್ ಗೊತ್ತಿಲ್ಲ. ಪುಟ್ಟಮ್ಮ ನ ಜಮೀನಿನ ಸರ್ವೆ ನಂ.30. ದಕ್ಷಿಣಕ್ಕೆ ಪುಟ್ಟಣ್ಣಯ್ಯು ರವರ ಜಮೀನು. ಅದರ ಸರ್ವೆ ನಂಬರ್ ಗೊತ್ತಿಲ್ಲ. ಉತ್ತರಕ್ಕೆ ಸರ್ವಮಂಗಳ ರವರ ಜಮೀನು ಇದೆ. ಅದರ ಸರ್ವೆ ನಂ.31.

5. 11ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ನನ್ನ ಮತ್ತು 11ನೇ ಪ್ರತಿವಾದಿಯ ನಡುವೆ ರಕ್ತಸಂಬಂಧದ ಬಗ್ಗೆ ಪಿ.ಸಿ.ಜೆ ನ್ಯಾಯಾಲಯ, ಮಾನ್ಯ ಹಿರಿಯ ಶ್ರೇಣಿ ನ್ಯಾಯಾಲಯ ಮತ್ತು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಕೇಸು ನಡೆಯಿತು ಎಂದರೆ ಸರಿ. ನಾನು ಮಾನ್ಯ

ಹಿರಿಯ ಶ್ರೇಣಿ ನ್ಯಾಯಾಲಯದಲ್ಲಿ 11 ನೇ ಪ್ರತಿವಾದಿ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ದಾವೆ ಹೂಡಿದ್ದೇನೆ ಎಂದರೆ ಸರಿ.

6. ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಅಂಶಗಳನ್ನು ಓದಿಸಿ ತಿಳಿದುಕೊಂಡಿದ್ದೇನೆ. ನಾನೇ ಮಾಹಿತಿ ಕೊಟ್ಟು ಬರೆಸಿದ್ದೇನೆ. ನಾನು ಸರ್ವೆ ನಂ. 32/2 ರ 2 ಎಕರೆ 23 ಗುಂಟೆಯ ಬಗ್ಗೆ ಮಾಹಿತಿ ನೀಡಿದ್ದೇನೆ. ನೀವು ನಿಮ್ಮ ಮುಖ್ಯ ವಿಚಾರಣೆಯನ್ನು ತಯಾರಿಸುವಾಗ ಈ ದಾವೆ ಸರ್ವೆ ನಂ.32/2 ರ 2 ಎಕರೆ 23 ಗುಂಟೆಗೆ ನಡೆಯುತ್ತಿದೆ ಎಂದು ಮಾಹಿತಿ ನೀಡಿದ್ದೀರಾ ಎಂದರೆ ಹೌದು ಎಂದು ನುಡಿಯುತ್ತಾರೆ. ಸರ್ವೆ ನಂ.32/2 ರ ಚಕ್ಕುಬಂದಿಗೆ ಸಂಬಂಧಿಸಿದಂತೆ ಮಾಹಿತಿ ನೀಡಿದ್ದೇನೆ. ನಾನು ವಕೀಲರ ಮುಂದೆ ನನ್ನ ಸಹಿ ಮಾಡಿದ್ದೇನೆ. ಈ ದಾವೆ ಸರ್ವೆ ನಂ.32/2 ರ 2 ಎಕರೆ 23 ಗುಂಟೆಗೆ ನಡೆಯುತ್ತಿಲ್ಲ ಎಂದರೆ ಸರಿಯಲ್ಲ. ನನಗೆ ಸರ್ವೆ ನಂ.30 ರಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ನನ್ನ ತಾಯಿ ಚಿಕ್ಕಮ್ಮನ ಹೆಸರಿನಲ್ಲಿದೆ ಎಂದು ನುಡಿಯುತ್ತಾರೆ. ನನ್ನ ತಾಯಿಯ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.32/2 ರ 2 ಎಕರ 23 ಗುಂಟೆಯಲ್ಲಿ ವಾದಿಗಳು ಯಾವುದೇ ಕಾಲದಲ್ಲೂ ಸ್ವಾಧೀನಾನುಭವ ಮತ್ತು ಮಾಲೀಕತ್ವದಲ್ಲಿಲ್ಲ ಎಂದರೆ ಸರಿಯಲ್ಲ. ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಈ ದಾವೆಯ ಬಗ್ಗೆ ಏನೂ ಗೊತ್ತಿಲ್ಲದಿದ್ದರೂ ವಾದಿಗಳ ಮಾತು ಕೇಳಿ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

**ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**ಹಿಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**